30 December 2025

Belagavi

# Jamborette Waves
# ಜಾಂಬೋರೆಟ್ ವೇವ್ಸ್

The official Newspaper of 29th Karnataka State Jamborette
Powered By
Scouting Waves

Vol: 01 | Issue: 04 | Pages: 08


| | |
|---|---|
| Jamborette Voice | 07 |
| What's up for Today? | 08 |
| Youth Forum | 04 |


# ನೃತ್ಯ ರೂಪದಲ್ಲಿ ಅನಾವರಣಗೊಂಡ ಸಾಂಸ್ಕೃತಿಕ ಸೊಬಗು





**ಬೆಳಗಾವಿ ಡಿ. 28:** ಜಾನಪದ ವೈಭವದ ಅಂಗವಾಗಿ ವಿವಿಧ ಜಿಲ್ಲೆಗಳ ತಂಡಗಳು ತಮ್ಮ ತಮ್ಮ ಪ್ರದೇಶದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ ಮನಮೋಹಕ ಜಾನಪದ ನೃತ್ಯ ಪ್ರದರ್ಶನಗಳನ್ನು ನೀಡಿದವು. ಪ್ರತಿ ತಂಡವೂ ತನ್ನ ಜಿಲ್ಲೆಯ ಜನಜೀವನ, ಕೃಷಿ ಸಂಸ್ಕೃತಿ, ಹಬ್ಬ ಹರಿದಿನಗಳು ಹಾಗೂ ಜನಪದ ಸಂಪ್ರದಾಯಗಳನ್ನು ನೃತ್ಯ ರೂಪದಲ್ಲಿ ಜೀವಂತವಾಗಿ ಮೂಡಿಸಿತು.

ಬಣ್ಣಬಣ್ಣದ ಮತ್ತು ವೈವಿಧ್ಯಮಯ ವೇಷಭೂಷಣಗಳು, ತಾಳಕ್ಕೆ ತಕ್ಕಂತೆ ಹಾಕಿದ ಲಯಬದ್ಧ ಹೆಜ್ಜೆಗಳು, ಜೊತೆಗೆ ಆಯ್ಕೆ ಮಾಡಲಾದ ಸುಮಧುರ ಜಾನಪದ ಹಾಡುಗಳು ಪ್ರೇಕ್ಷಕರ ಮನಸ್ಸಿಗೆ ಅಪಾರ ಆನಂದ ನೀಡಿದವು. ನೃತ್ಯಗಾರರ ಉತ್ಸಾಹ, ಸಂಯಮಿತ ಚಲನಗಳು ಮತ್ತು ಮನಮುಟ್ಟುವ ಮುಖಭಾವಗಳು ಪ್ರದರ್ಶನಕ್ಕೆ ಇನ್ನಷ್ಟು ಕಳೆ ತುಂಬಿದವು.

ಈ ಜಾನಪದ ನೃತ್ಯಗಳ ಮೂಲಕ ಪ್ರತಿ ಜಿಲ್ಲೆಯ ಸಂಸ್ಕೃತಿ, ಪರಂಪರೆ ಮತ್ತು ವೈಶಿಷ್ಟ್ಯತೆ ಸೊಗಸಾಗಿ ಅನಾವರಣ ಗೊಂಡಿತು. ಕಾರ್ಯಕ್ರಮವು ಕೇವಲ ಮನರಂಜನೆಯಷ್ಟೇ ಅಲ್ಲದೆ, ಮಕ್ಕಳಲ್ಲಿ ಹಾಗೂ ಪ್ರೇಕ್ಷಕರಲ್ಲಿ ಜಾನಪದ ಪರಂಪರೆಯ ಮಹತ್ವವನ್ನು ಅರಿಯುವಂತೆ ಮಾಡಿತು. ಒಟ್ಟಾರೆ ಜಾನಪದ ವೈಭವದ ಈ ಪ್ರದರ್ಶನಗಳು ಜಾಂಬೋರೇಟ್ ಕಾರ್ಯಕ್ರಮಕ್ಕೆ ವಿಶಿಷ್ಟ ಶೋಭೆ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ನೀಡಿದವು.









# ಸಾಂಪ್ರದಾಯಿಕ ನಡಿಗೆ 'ಪೇಜಂಟ್ ಶೋ' ಗೆ ಮರುಳಾದ ಜಾಂಬೋರೆಟ್



**ಬೆಳಗಾವಿ ಡಿ. 28:** 29ನೇ ಕರ್ನಾಟಕ ರಾಜ್ಯ ಜಾಂಬೋರೆಟ್‌ನ ಅತ್ಯಂತ ಆಕರ್ಷಕ ಕಾರ್ಯಕ್ರಮಗಳಲ್ಲಿ ಒಂದು ಪೆಜೆಂಟ್ ಶೋ. ಸಾಂಪ್ರದಾಯಿಕ ಉಡುಗೆ ತೊಡುಗೆಗಳೊಂದಿಗೆ ವಿದ್ಯಾರ್ಥಿಗಳು ಪಥಸಂಚಲನ ನಡೆಸಿದ್ದು ಎಲ್ಲರ ಗಮನಸೆಳೆಯಿತು. ರಾಜ್ಯದ ಎಲ್ಲ ಜಿಲ್ಲೆಗಳ ತಂಡಗಳು ತಮ್ಮ ತಮ್ಮ ಸಂಸ್ಕೃತಿ, ಆಚಾರ-ವಿಚಾರಗಳನ್ನು ಪ್ರತಿಬಿಂಬಿಸುವ ವೇಷಭೂಷಣಗಳೊಂದಿಗೆ, ಡೋಲು ಬಾರಿಸುತ್ತಾ ನೃತ್ಯಮಯವಾಗಿ ಪೇಜಂಟ್ ನಡಿಗೆ ನಡೆಸಿದರು.

ಕುದುರೆಯ ಮೇಲೆ ವೀರ ರಾಣಿ ಚೆನ್ನಮ್ಮ ಹಾಗೂ ತಲೆಯ ಮೇಲೆ ಯಲ್ಲಮ್ಮ ದೇವಿಯನ್ನು ಹೊತ್ತು ಸಾಗಿದ ದೃಶ್ಯ, ಅದರ ಹಿಂದೆ ಸಾಗಿದ ದೊಡ್ಡ ಗಂಡು-ಹೆಣ್ಣು ಬೆದರು ಗೊಂಬೆಗಳು ನೋಡುಗರನ್ನು ಆಕರ್ಷಿಸಿದವು.

ಬೆಂಗಳೂರು ಬಿಬಿಎಂಪಿ ತಂಡ ಕರಗ, ಬಾಗಲಕೋಟೆಯ ರನ್ನನ ಗದಾಯುದ್ಧ, ರಾಯಚೂರಿನ ಡೊಳ್ಳು ಕುಣಿತ, ಶಿವಮೊಗ್ಗದ ಕುವೆಂಪು, ಧಾರವಾಡದ ಸಿದ್ಧಾರೂಢ ಸ್ವಾಮಿಗಳ ವೇಷ, ಗದಗಿನ ಪುಟ್ಟರಾಜ ಗವಾಯಿ, ಬಳ್ಳಾರಿಯ ಮೊಹರಂ ಉತ್ಸವ, ಚಿತ್ರದುರ್ಗದ ಓಬವ್ವ, ಚಿಕ್ಕ ಮಗಳೂರಿನ ಶಂಕರಾಚಾರ್ಯರ ವೇಷ, ಕಾರವಾರದ ಕೈಗಾ, ಹಾವೇರಿಯ ಬ್ಯಾಡಗಿ ಮೆಣಸಿನಕಾಯಿ, ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆ, ದಕ್ಷಿಣ ಕನ್ನಡದ ತುಳು ಸಂಸ್ಕೃತಿ ಯಕ್ಷಗಾನ ಹಾಗೂ ಹುಲಿ ವೇಷ, ಕಲಬುರ್ಗಿಯ ಶರಣಬಸವೇಶ್ವರ ಜಾತ್ರೆ, ಮೈಸೂರಿನ ಒಡೆಯರ ಮನೆತನ ಮುಂತಾದ ವೈವಿಧ್ಯಮಯ ವೇಷಭೂಷಣಗಳು ಪೇಜಂಟ್ ಶೋಗೆ ವೈಭವ ಹೆಚ್ಚಿಸಿತು.

ರಾಜ್ಯದ ಸಾಂಸ್ಕೃತಿಕ ವೈವಿಧ್ಯತೆಯನ್ನು ಒಂದೇ ವೇದಿಕೆಯಲ್ಲಿ ಪರಿಚಯಿಸಿದ ಈ ಪೇಜಂಟ್ ಶೋ ಜಾಂಬೋರೆಟ್‌ಗೆ ವಿಶೇಷ ಕಳೆ ತಂದಿತು



ಪೆಜೆಂಟ್ ಶೋನಲ್ಲಿ ಆಯಾ ನಾಡಿನ ಕಲೆ, ಹಾಗೂ ಇತಿಹಾಸದ ಅನುಭವ ಇರಬೇಕು ಅಂದಾಗ ಮಾತ್ರ ಕಲೆ ತಾನಾಗಿ ಹೊರಹೊಮ್ಮುತ್ತದೆ. ಇಂತಹ ಅರಿವು ನಮ್ಮ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ಇದೆ. ಅನೇಕ ಜಿಲ್ಲೆಯ ಮಕ್ಕಳು ತಮ್ಮ ಪ್ರದರ್ಶನವನ್ನು ಮಾಡಿದ್ದಾರೆ ಅವರೆಲ್ಲರಿಗೂ ಅಭಿನಂದನೆಗಳು.

**ಪಿ ಜಿ ಆರ್ ಸಿಂಧ್ಯಾ**

ರಾಜ್ಯ ಮುಖ್ಯ ಆಯುಕ್ತರು, ಬಿಎಸ್‌ಜಿ ಕರ್ನಾಟಕ

# YOUTH ENGAGEMENT AT THE JAMBORETTE

## SCOUT SKILLO











The activity base was dedicated towards developing the competencies of young people while preparing them for life. The activities conducted included but not limited to kite making from paper, creating woggles and undertaking simple model pioneering projects. The creativity of the participants was tested when they painted leaves and made socially impacting posters communicating the importance of environmental sustainability. The activity base helped construct survival apparatus comprising an improvised shelter and improvised shelter that can be useful in case of emergencies. Finally, the activity base had a photo booth for taking some amazing photos to document the visit.

## SCOUTS AND GUIDES SHINING BRIGHT



The Scouts Go Solar activity station in turn harvests the solar energy that is abundantly available to operate differentiated devices while reiterating the commitment to environmental sustainability and responsible sourcing of energy. Young people used magnifying glasses to make art on wooden planks that were made available as an activity. Understanding the significance and advancements in the domain of solar energy in turn motivated the participants to employ alternatives to conventional sources while explaining the diverse benefits of the same. The base saw active participation from all while helping renew interest in renewable energy.

## THINKING OF NATURE: SEED BALL MAKING



The seed ball making activity in turn helped young people to adopt innovative ways of contributing towards afforestation and thereby, boost their contribution towards protecting Mother Nature. The composition of the seed ball and the method of its disposal in suitable areas helped participants understand the purpose and use of the same in general. Finally, it was time for everyone to make their own seed balls using their hands to perfect the art of creating seed balls which helped them personally connect to the process. Everyone were encouraged to carry forward the learning's and implement it for creating a better world together.

## DECODING DRONES: THINGS TO REMEMBER



The activity station was dedicated to understanding the theoretical knowledge on the drones and the technicalities associated with its operations. Information on its structure, usage and the laws governing the same was communicated to the participants for them to generate a robust understanding while remembering the basic principles for ensuring safety. The scope of drones and their evolving significance in various sectors like defence, aerospace, photography and mapping helped evaluate its current significance while briefing on some advancements helped young people decode drones in general.

# EMBARK ON THE JOURNEY OF KNOWLEDGE & DISCOVERY

## YOGA PRANA VIDYA

The exhibition stall was inclined towards educating young people on the significance of yoga and its importance in maintaining a healthy lifestyle deemed necessary to actively participate in all the activities within and beyond the jamborette in general. Some resourceful methods of breathing were theoretically explained while being practically demonstrated to the participants who were further encouraged to practice the same and seek assistance for learning the skill of breathing. The concept of forgiveness was communicated efficiently which underlined the scope and consequences of maintaining an attitude benefiting oneself and everyone associated with that person. The exhibition stall helps refine the overall character and spiritual development of young people with the hope that they will transform into active global citizens while remaining at the best of their health.









## PHILATELIC WORD

The stall was hosted by the volunteers representing the Department of Posts, Belagavi Division with the objective of rejuvenating the interest of participants with respect to the use and collection of posts. The stall was indeed an embodiment of a working postal office within the jamborette which included a special placement of the letters box which was used by young people to author letters from the jamborette to their loved ones expressing their joy and vibrant experiences as an activity of engagement. The stall was indeed unique and distinctive in its nature and composition considering its special display of postal items which have deep rooted connection to the district of Belagavi. The special commemorative postal covers were being displayed and sold to all the participants who were interested in collecting the same as a mark of remembering their visit to the jamborette conducted in Belagavi.

## EDUCATION AND SOCIAL

There was multiple education oriented stalls located in the jamborette with the objective of intellectually stimulating participants and drive the spirit of holistic and continuous learning. Jain Heritage, Belagavi in turn projected a stall highlighting the theme of the jamborette which was growing with nature displayed vibrantly across innovative photo booths. There was a stall spearheaded by KHS Government School, Mudalagi which displayed photographs linked to the human digestive system while educating young people on the varied organs constituting their bodies and the best practices to maintain them in good condition for boosting their health. Lastly, there was a stall of Shri Durga Matha Association, a Women Self Help Group from Belagavi which showcased their products and shared the impact of the group on sustaining livelihoods and building economic value involving benefaction to all the members of the society.





# ವಿವಿಧ ಜಿಲ್ಲೆಗಳಿಂದ ´ಡೇ ಸೆಲೆಬ್ರೆಶನ್´

**ಬೆಳಗಾವಿ ಡಿ. 29:** ಜಾಂಬೋರೇಟ್‌ನಲ್ಲಿ ವಿವಿಧ ಜಿಲ್ಲೆಗಳ ದಿನಗಳನ್ನು ಸೊಗಸಾಗಿ ಆಚರಿಸಲಾಯಿತು. ರಾಜ್ಯದ ನಾನಾ ಭಾಗಗಳಿಂದ ಬಂದವರ ಮುಂದೆ ತಂತಮ್ಮ ಜಿಲ್ಲೆಗಳ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ವೈವಿಧ್ಯತೆಯನ್ನು ಪ್ರದರ್ಶಿಸುವ ಉದ್ದೇಶದಿಂದ ಈ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಉತ್ಸಾಹಭರಿತ ನೃತ್ಯಗಳು, ಸಂಗೀತ ಪ್ರದರ್ಶನಗಳು ಹಾಗೂ ಜಿಲ್ಲೆಗಳ ವಿಶಿಷ್ಟತೆಗಳನ್ನು ವಿವರಿಸುವ ಜಿಲ್ಲೆಯ ಪದಾಧಿಕಾರಿಗಳ ಭಾಷಣಗಳು ವಿಶೇಷ ಕಳೆ ನೀಡಿದವು. ರುಚಿಕರವಾದ ಆಹಾರ ಮತ್ತು ಆತಿಥ್ಯವು ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿ, ಈ ದಿನವನ್ನು ಸ್ಮರಣೀಯವಾಗಿಸಿತು.



ಜಾಂಬೋರೇಟ್‌ನ ಮೂರನೇ ದಿನ ಕಲ್ಯಾಣ ಕರ್ನಾಟಕ, ದಾವಣಗೆರೆ ಹಾಗೂ ಚಿಕ್ಕಬಳ್ಳಾಪುರದ ವಿದ್ಯಾರ್ಥಿಗಳು ಕಾರ್ಯಕ್ರಮ ನೀಡಿದರು. ದಾವಣಗೆರೆಯ ಬೆಣ್ಣೆ ದೋಸೆ ಮುಖ್ಯ ಆಕರ್ಷಣೆಯಾಗಿತ್ತು.










# ಬ್ಯಾಂಡ್ ಬಾರಿಸಿದ ಸಿಂಧಿಯಾ!



ಕಲ್ಯಾಣ ಕರ್ನಾಟಕ ದಿನದ ಆಚರಣೆಯ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತ ಪಿಜಿಆರ್ ಸಿಂಧಿಯಾ ಅವರು ಬ್ಯಾಂಡ್ ಬಾರಿಸಿದ್ದು ಮುಖ್ಯ ಆಕರ್ಷಣೆಯಾಗಿತ್ತು.

# ಧ್ವಜಾರೋಹಣದಲ್ಲಿ ಮನ್ನಿಕೇರಿ



ಸಬ್ ಕ್ಯಾಂಪ್-3 ರ ಧ್ವಜಾರೋಹಣ ಕಾರ್ಯಕ್ರಮದಲ್ಲಿ 29ನೇ ಕರ್ನಾಟಕ ಜಾಂಬೋರೇಟ್ ನ ನಾಯಕರಾದ ಭರಶೆಟ್ಟಿ, ಗಜಾನನ ಮನ್ನಿಕೇರಿ ಇನ್ನಿತರರು ಉಪಸ್ಥಿತರಿದ್ದರು.

# YOUTH FORUM: YOUNG MINDS DRIVING CHANGE TOGETHER

**Belagavi:** The youth forum of the jamborette was organised with the theme "Growing with Nature" which saw active representation of 30 scouts and guides from differentiated districts from across the state. Young people actively engaged in constructive discussions and undertook meaningful interactions to propose recommendations with respect to the decided theme. The forum provided a platform for the participants to present their perspectives and express their innovative ideas that would in turn shape the future of scouting in general while also creating a network amongst themselves that would continue to actively contribute towards the empowerment of young people beyond this jamborette.





# ಚಂದ್ರನನ್ನು ಕಂಡ ಚಿಣ್ಣರಿಗಳು!



ಜಾಂಬೋರೇಟ್‌ನಲ್ಲಿ ಮಕ್ಕಳಿಗೆ ಟೆಲಿಸ್ಕೋಪ್ ಮೂಲಕ ಸೌರಮಂಡಲದ ವೀಕ್ಷಣೆಗೆ ಅಪೂರ್ವ ಅವಕಾಶ ಕಲ್ಪಿಸಲಾಗಿತ್ತು. ಆ ಸಂದರ್ಭದಲ್ಲಿ ಕ್ಯಾಮೆರಾ ಕಣ್ಣಿಗೆ ಕಂಡ ಚಂದಿರ!

GET REAL TIME UPDATES ON SOCIAL MEDIA!

Instagram | Facebook | Youtube

29TH KARNATAKA STATE JAMBORETTE

Join us today for
District Day CELEBRATIONS

Event Schedule:
12:00 - 01:00 PM: CHITRADURGA
02:00 - 03:00 PM: CHIKKAMAGALURU & HASSAN
03:00 - 04:00 PM: BENGALURU RURAL
05:00 - 06:00 PM: BENGALURU NORTH
Conference Hall

# VIEWING JAMBORETTE THROUGH THE LENS





Inspired by Learning: An educational visit to VTU





Visit to Bio Energy Research Information and Demonstration Centre, Ramakrishna Ashram and Suvarna Soudha





Aerial View of the Jamborette Site

## ಮೋಜಿನ ಆಟಗಳಿಂದ ಜಾಂಬೋರೇಟಿಗೆ ಉಲ್ಲಾಸದ ಕಳೆ

29ನೇ ಜಾಂಬೋರೇಟಿನಲ್ಲಿ ಭಾಗವಹಿಸಿದ್ದ ಮಕ್ಕಳ ಮನರಂಜನೆ ಮತ್ತು ಚೈತನ್ಯ ಹೆಚ್ಚಿಸುವ ಉದ್ದೇಶದಿಂದ ವಿಶೇಷ ಮೋಜಿನ ಆಟಗಳ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಜಾಂಬೋರೇಟಿನ ಚಟುವಟಿಕೆಗಳ ನಡುವೆ ಈ ಆಟಗಳು ಮಕ್ಕಳಿಗೆ ಸಂತಸ, ನಗು ಮತ್ತು ಉತ್ಸಾಹ ತುಂಬಿದ ಕ್ಷಣಗಳನ್ನು ನೀಡಿದವು.

ಕಾರ್ಯಕ್ರಮದಲ್ಲಿ ಕಪ್ಪೆ ಜಿಗಿತ, ಬಕೆಟಿನಲ್ಲಿ ಚೆಂಡು ಎಸೆತ, ಲೋಟಗಳಲ್ಲಿ ನೀರನ್ನು ಸಾಗಿಸುವುದು, ವೃತ್ತದಲ್ಲಿ ರಿಂಗ್ ಹಾಕುವುದು, ಪ್ರಾಣಿಗಳ ಧ್ವನಿ ಕೂಗುತ್ತಾ ಸಾಗುವುದು ಹಾಗೂ ಸೂಜಿಗೆ ದಾರ ಪೋಣಿಸುವುದು ಮುಂತಾದ ವಿವಿಧ ರಂಜನೀಯ ಆಟಗಳನ್ನು ನಡೆಸಲಾಯಿತು. ಈ ಆಟಗಳು ಮಕ್ಕಳ ಶಾರೀರಿಕ ಚಟುವಟಿಕೆ, ಏಕಾಗ್ರತೆ, ಚುರುಕು ಹಾಗೂ ಸೃಜನಶೀಲತೆಯನ್ನು ಉತ್ತೇಜಿಸುವಂತಿದ್ದವು.






ಆಟಗಳಲ್ಲಿ ಭಾಗವಹಿಸಿದ ಮಕ್ಕಳು ಅಪಾರ ಉತ್ಸಾಹದಿಂದ ಸ್ಪರ್ಧಿಸಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಸಹಪಾಠಿಗಳೊಂದಿಗೆ ಸಹಕಾರ, ಸ್ನೇಹಭಾವ ಮತ್ತು ಕ್ರೀಡಾಸ್ಫೂರ್ತಿಯನ್ನು ಬೆಳೆಸುವಲ್ಲಿ ಈ ಮೋಜಿನ ಆಟಗಳು ಮಹತ್ವದ ಪಾತ್ರ ವಹಿಸಿದವು. ಮಕ್ಕಳ ನಗು, ಚಪ್ಪಾಳೆ ಮತ್ತು ಹರ್ಷೋದ್ಗಾರಗಳಿಂದ ಜಾಂಬೋರೇಟಿನ ವಾತಾವರಣ ಸಂಪೂರ್ಣವಾಗಿ ಉಲ್ಲಾಸಭರಿತವಾಗಿ ಮೂಡಿಬಂದಿತು. ಈ ರೀತಿಯ ಮೋಜಿನ ಆಟಗಳ ಕಾರ್ಯಕ್ರಮಗಳು ಮಕ್ಕಳಿಗೆ ಮಾನಸಿಕ ವಿಶ್ರಾಂತಿ ನೀಡುವುದರ ಜೊತೆಗೆ, ಜಾಂಬೋರೇಟಿನ ಅನುಭವವನ್ನು ಇನ್ನಷ್ಟು ಸ್ಮರಣೀಯವಾಗಿಸಿವೆ ಎಂದು ಆಯೋಜಕರು ಅಭಿಪ್ರಾಯಪಟ್ಟರು.





# VIEWING JAMBORETTE THROUGH THE LENS



## ADVENTURE VALLEY







## FUN IN FARM

## HIKE & COMMUNITY SERVICE









## FOREST TRAIL





## ಒಗ್ಗಟ್ಟಿನ ಸಂದೇಶ



## ಆಯುಕ್ತರಿಂದ ಆಸ್ಪತ್ರೆ ಭೇಟಿ



ರಾಜ್ಯ ಮುಖ್ಯ ಆಯುಕ್ತ ಪಿಜಿಆರ್ ಸಿಂಧಿಯಾ ಅವರು ಆಸ್ಪತ್ರೆಗೆ ಭೇಟಿ ನೀಡಿ, ಕುಶಲೋಪರಿ ವಿಚಾರಿಸಿದರು.



The jamborette is truly incredible considering the active participation in large number of scouting activities and the experience of meeting scouts from across the state.

**Vedant Mungarwadi**
L.S.A High School, Belagavi



The jamborette paints a new glorious picture of scouting activities which celebrates scouting spirit while being driven by nutritious meals. I am thankful for this opportunity.

**Sanjay Shetty**
Athreya Vidyaniketan School, Banglore North



Wanted to thank the staff for making the jamborette happen and creating a memorable event for everyone. The surroundings are beautiful and helps connect with the nature.

**Parthi**
Amritha Vidyalaya School, Belagavi



The jamborette was well managed with challenging activities which helped increased the joy of participating alongside friends from all across the state. It will be cherished for the time to come.

**Vedant Mungarwadi**
L.S.A High School, Belagavi



I feel like this is a right platform for every student to show their talent and skills. Irrespective of age and gender, we all are enjoying this Jamborette and experiencing every facility provided here.

**Srujan M. K.**
VVIS, Bangalore South



ರಿಜಿಸ್ಟ್ರೇಶನ್ ಟೀಂನಲ್ಲಿ ಕೆಲಸ ಮಾಡಿದ್ದೇನೆ. ಇಲ್ಲಿಗೆ ಬಂದ ಯಾರಿಗೂ ಯಾವುದೇ ಗೊಂದಲಗಳಾಗದೇ, ಎಲ್ಲವನ್ನೂ ಉತ್ತಮ ರೀತಿಯಲ್ಲಿ ನಾವು ನಿರ್ವಹಣೆ ಮಾಡಿದ್ದೇವೆ. ಸಾವಿರಾರು ವಿದ್ಯಾರ್ಥಿಗಳನ್ನು ನಿರ್ವಹಣೆ ಮಾಡಿದ್ದು ಒಂದು ಅಪೂರ್ವ ಅನುಭವ.

**ಚಿಂತನ್**
ಸರ್ವಿಸ್ ರೋವರ್, ದಕ್ಷಿಣ ಕನ್ನಡ






ಫನ್ ಬೇಸ್ ನ ಸೂಜಿದಾರ, ಲಗೋರಿ, ನಿಂಬೆ ಚಮಚ, ಚೆಂಡು ದಾಂಡು ಆಟಗಳು ಮನೋರಂಜನೆ ಜೊತೆಗೆ ಏಕಾಗ್ರತೆಯನ್ನು ಹೆಚ್ಚಿಸಿತು. ಜಾಂಬುರೇಟ್ ನ ಯಶಸ್ಸಿಗೆ ಎಲ್ಲಾ ಸರ್ವಿಸ್ ರೋವರ್ಸ್, ರೇಂಜರ್ಸ್ ಮತ್ತು ಸಿಬಂದಿವರ್ಗ ಬಹಳ ಶ್ರಮಿಸುತ್ತಿದ್ದಾರೆ. ಇದು ಜೀವನ ಪರ್ಯಂತ ನೆನಪಿನಲ್ಲಿ ಉಳಿಯಲಿದೆ.

**ಪೂರ್ವಿ & ಹಂಸವೇಣಿ**, ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಶಾಲೆ, ಅರಸೀಕೆರೆ, ಹಾಸನ



ನಮ್ಮ ಮಕ್ಕಳು ಎಲ್ಲಾ ಆಟ, ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಸ್ಪರ್ಧಾತ್ಮಕ ಮನೋ ಭಾವವನ್ನು ವ್ಯಕ್ತಪಡಿಸಿರುವುದು ಸಂತೋಷ ವಾಗಿದೆ. ಇಲ್ಲಿನ ಎಲ್ಲಾ ವ್ಯವಸ್ಥೆಯು ಗೊಂದಲವಿಲ್ಲದೆ ಅಚ್ಚುಕಟ್ಟಾಗಿದೆ. ಇಲ್ಲಿ ಮಕ್ಕಳು ಒಬ್ಬರನೊಬ್ಬರು ನೋಡಿ ಧನಾತ್ಮಕ ಗುಣಗಳನ್ನು ಅಳವಡಿಸಿಕೊಳ್ಳುತಿದ್ದಾರೆ

**ಕೀರ್ತನಾ ಎನ್ ಆರ್**, ಗೈಡ್ ಲೀಡರ್, ನವಜ್ಯೋತಿ ಆಂಗ್ಲ ಮಾಧ್ಯಮ ಶಾಲೆ, ಶಿವಮೊಗ್ಗ



ಜಾಂಬೋರೇಟ್‌ನಲ್ಲಿ ಎಲ್ಲವೂ ಇಷ್ಟವಾಗುತ್ತಿದೆ. ಸ್ಕೌಟ್ ಸ್ಕಿಲ್ಲೋ ರಾಮಾ, ಟೆಂಟ್ ಮೇಕಿಂಗ್, ಲೀಫ್ ಆರ್ಟ್, ಕೈಟ್ ತಯಾರಿಕೆ, ಮಾಡೆಲ್ ತಯಾರಿಕೆ ಹೀಗೆ ಎಲ್ಲವೂ ಚೆನ್ನಾಗಿದ್ದವು. ನಾನು ನನ್ನ ಸ್ನೇಹಿತರೆಲ್ಲರೂ ಇಲ್ಲಿ ಆನಂದಿಸುತ್ತಿದ್ದೇವೆ.

**ಝ್ಯುಬಾ ತಬಾಸುಮ್**
ಕೆ. ಕೆ. ಆಂಗ್ಲ ಮಾಧ್ಯಮ ಶಾಲೆ, ಬೆಂಗಳೂರು ದಕ್ಷಿಣ



ಜಾಂಬೋರೇಟ್ ಮಕ್ಕಳಿಗೆ ನಿಸರ್ಗ, ಜೀವನ ಕೌಶಲ್ಯಗಳು, ಹೊಂದಾಣಿಕೆ ಮತ್ತು ಸ್ವಚ್ಛತೆಯ ಮಹತ್ವವನ್ನು ಪ್ರಾಯೋಗಿಕವಾಗಿ ಕಲಿಸಿದೆ. ರಾಜ್ಯದ ವಿವಿಧ ಭಾಗಗಳ ಮಕ್ಕಳೊಂದಿಗೆ ಬೆರೆತು ಸಕಾರಾತ್ಮಕ ಗುಣಗಳನ್ನು ಕಲಿಯುವ ಉತ್ತಮ ಅವಕಾಶ ಇದು. ಆಹಾರ, ಬಿಸಿನೀರು, ಸ್ವಚ್ಛತೆ ಹಾಗೂ ಶೌಚಾಲಯ ಸೇರಿದಂತೆ ಎಲ್ಲಾ ವ್ಯವಸ್ಥೆಗಳು ಅಚ್ಚುಕಟ್ಟಾಗಿವೆ.

**ಎಲ್. ವೈ. ಚೌಗಲೇ**
ಸ್ಕೌಟ್ ಮಾಸ್ಟರ್, ಚಿಕ್ಕೋಡಿ

## ಜಾಂಬೂರೇಟ್ ಜಾಂಬೂರೇಟ್

ಸ್ಕೌಟ್ಸ್ - ಗೈಡ್ಸ್ ಜಾಂಬೂರೇಟ್ ಜಾಂಬೂರೇಟ್
ಒಂದೇ ಧ್ವಜದ ನೆರಳಲ್ಲಿ ಸಹಬಾಳ್ವೆಯ ಉತ್ಸವ
ಸೇವೆ, ಶಿಸ್ತು, ತ್ಯಾಗ ಪಥದಲಿ ಸಾಗಿಸುವ ನಿತ್ಯೋತ್ಸವ
ಸ್ಕೌಟ್ಸ್ - ಗೈಡ್ಸ್ ಉತ್ಸವ ಅತ್ಯುತ್ಸವ
ಜೀವನ ಮೌಲ್ಯ ಕಲಿಸುವ ಮಹಾ ಉತ್ಸವ

ಸದಾ ಸಿದ್ಧನಾಗು ಧೈಯದಲಿ
ಸಹಕಾರದ ಶಕ್ತಿ ಹೊಳೆಯುತ್ತದೆ
ಸೌಟ್ - ಗೈಡ್ ಹೆಸರಿನಲ್ಲೇ ಅಡಗಿದೆ
ದೇಶಸೇವೆಯ ಅಮೂಲ್ಯ ಮಂತ್ರ

ವಿವಿಧ ಭಾಷೆ, ವೇಷ, ಸಂಸ್ಕೃತಿ,
ಒಂದೇ ನಗು, ಒಂದೇ ಸ್ನೇಹ ಕಥೆ
ಜಂಬೂರೇಟ್‌ನಲಿ ಬೆರೆತು ಹೋಗುವೆವು,
ವಿಶ್ವವೇ ಒಂದು ಕುಟುಂಬ ಎಂಬ ಸತ್ಯದಲ್ಲಿ.

ಧ್ವಜಾರೋಹಣದ ಹೊತ್ತಲ್ಲಿ ಗಂಭೀರ ವಾಗ್ದಾನ,
ಸತ್ಯ, ಸೇವೆ, ಶೌರ್ಯದ ಸಂಕಲ್ಪ
ಸೌಟ್ - ಗೈಡ್ ಹೃದಯದಲ್ಲಿ ಬೆರೆಯುತ್ತದೆ
ಮಾನವೀಯತೆಯ ಅಚ್ಚಳಿಯ ಅರಿವು.

ಬೆಳಗಿನ ಪ್ರಾರ್ಥನೆ, ಸಂಜೆಯ ಮನರಂಜನೆ
ಶಿಬಿರದ ಬದುಕೇ ಒಂದು ಪಾಠಾಲಯ
ಸ್ವಾವಲಂಬನೆ, ಶಿಸ್ತು, ಸಹಕಾರ, ಸತ್ಯ, ಶಾಂತಿ
ಪ್ರತಿ ಕ್ಷಣವೂ ನೀತಿ ಪಾಠ.

ಜಂಬೂರೇಟ್ ನೆನಪುಗಳ ಖಜಾನೆ
ಜೀವನಪೂರ್ತಿ ಉಳಿಯುವ ಅನುಭವದ ತಾಣ
ಸೌಟ್ - ಗೈಡ್ಸ್ ಹಾದಿಯಲ್ಲಿ ನಡೆದವರು
ನಾಳೆಯ ಉತ್ತಮ ನಾಗರಿಕರು.

ದೇಶಸೇವೆಯ ಧೃಡ ಸಂಕಲ್ಪ
ಸೌಟ್ - ಗೈಡ್ ದೇಶದ ಕಾವಲುಗಾರರು,
ಸಮಾಜ ಸೇವೆಯೇ ನಮ್ಮ ಉಸಿರು
ಜಂಬೂರೇಟ್ ವೇದಿಕೆಯಲ್ಲಿ ನಿಂತು
ಸೇವೆ ಮಾಡುವೆವು ಜೀವಮಾನವಿಡೀ



**ಬೀರಪ್ಪ ಕಡ್ಲಿಮಟ್ಟಿ**
**ಕುಷ್ಟಗಿ ಜಿಲ್ಲೆ, ಕೊಪ್ಪಳ**

# Today's Schedule

| | |
|---|---|
| 06:00 AM | Rouse |
| 06:30 AM | Sapling Plantation |
| 09:00 AM - 1 PM | Module Activities:<br>1. Adventure Valley<br>2. Hike and community service<br>3. Scout skillo Sustainable<br>4. SDG HUB<br>5. Exhibition organized by various departments & Districts<br>6. Educational tour<br>7. Forest Trail<br>8. Fun in Farm<br>9. Scout Skillo |
| 11.00 A.M. | Contingent Leaders Meeting |
| 01:00 PM | Lunch |
| 02:00- 04:30 PM | Physical Display |
| 05:00 PM | Night Hike |
| 05:30 PM | "Model Gram Panchayat Meeting" SKIT by RDPR department |
| 06:00 PM | Drama: Anubhava Mantapa |
| 08:30 PM | Camp Fire |
| 10:00 PM | Lights Off |

## WEATHER REPORT

Day 12/30

30° Hi

RealFeel® 32°

RealFeel Shade™ 29°

Hazy sunshine

| | | | |
|---|---|---|---|
| Max UV Index | 5.0 (Moderate) | Probability of Precipitation | 0% |
| AccuLumen Brightness Index™ | 9 (Very Bright) | Probability of Thunderstorms | 0% |
| Wind | ENE 7 km/h | Precipitation | 0.0 mm |
| Wind Gusts | 22 km/h | Cloud Cover | 10% |

## ACTIVITY CHECKER

| Activity Name | No. of Participants |
|---|---|
| SDG Hub | 600 |
| Adventure Valley | 904 |
| Forest Trail | 78 |
| Fun in Farm | 75 |
| Fun Base | 709 |
| Scout Skillo | 857 |
| Hike | 540 |
| Educational Tour (VTU) | 541 |
| Educational Tour Suvarna Soudha | 440 |

# WHAT'S UP FOR TODAY?







